**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04-03-2025:**

**ಮುಂದುವರೆದ ಪಾಟೀಸವಾಲುಃ** 2ನೇ ಪಕ್ಷಗಾರರ **ಪರ ವಕೀಲರಿಂದಃ**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ನ್ಯಾಯಾಲಯದಲ್ಲಿ ಕಾಣಿಸಿದ ಲೆಕ್ಕತಃಖ್ತೆ ಬಗ್ಗೆ ನಾನು ಯಾವುದೇ ದಾಖಲೆ ಈವರೆಗೆ ಕೊಟ್ಟಿಲ್ಲ. ಅದನ್ನು ನಾನು ನನಗೆ ಖುಷಿಬಂದಂತೆ ಲೆಕ್ಕಾಚಾರ ಮಾಡಿ ಹಾಕಿರುವುದು ಎಂದರೆ ಸರಿಯಲ್ಲ.

ನನಗೆ ಒಂದು ವರ್ಷಕ್ಕೆ 36 ದಿನಗಳ ರಜೆ ಸೌಲಭ್ಯ ಇತ್ತು. ನಾನು ಏಪ್ರಿಲ್ 2017ರಲ್ಲಿ ಸೇವೆಗೆ ಸೇರಿರುತ್ತೇನೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ 2017ರಲ್ಲಿ ನನಗೆ 47ದಿವಸಗಳ ರಜೆ, 2018ರಲ್ಲಿ 49 ರಜೆ, 2019ರಲ್ಲಿ 45, 2020 ರಲ್ಲಿ 40, 2021ರಲ್ಲಿ 31 ದಿವಸಗಳ ವೇತನ ಸಹಿತ ರಜೆ ಬರಬೇಕಾಗಿತ್ತು ಎಂದು ಬರೆಸಿದ್ದೇನೆ ಎಂದರೆ ನಿಜ. ನನಗೆ ವೇತನಸಹಿತ ರಜೆಯ ಯಾವುದೂ ಸೌಲಭ್ಯ ಇರಲಿಲ್ಲ ನನ್ನ ಮನಸ್ಸಿಗೆ ಇಚ್ಛೆಬಂದಂತೆ ಬರೆಸಿದ್ದೇನೆ ಎಂದರೆ ಸರಿಯಲ್ಲ. ಈ ಕೇಸು ಹಾಕಿವುದಕ್ಕಿಂತ ಮೊದಲು ನಾನು ಈ ಅವಧಿಗಳ ವೇತನಸಹಿತ ರಜೆ ಬರಬೇಕೆಂದು ಕೇಳಿಲ್ಲ ಎಂದರೆ ಸರಿಯಲ್ಲ ಆ ರೀತಿ ಕೇಳಿದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ನಾನು ಆ ರೀತಿ ವೇತನಸಹಿತ ರಜೆ ಪಡೆಯಲು ಅರ್ಹರಾಗಿರಲಿಲ್ಲ, ಆದ್ದರಿಂದ ನಾನು ಅದನ್ನು ನೀಡುವಂತೆ 2ನೇ ಪಕ್ಷಗಾರರಲ್ಲಿ ಕೇಳಲೂ ಇಲ್ಲ, ಈ ಕಾರಣದಿಂದ ಯಾವುದೇ ದಾಖಲೆ ಕೂಡ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಹೇಳುತ್ತಿರುವುದು ಎಂದರೆ ಸರಿಯಲ್ಲ.

ನಾನು ನನ್ನ ಸೇವಾ ಅಧಿಯಲ್ಲಿ ಯಾವುದೇ ವರ್ಷದಲ್ಲಿ ಬೋನಸ್ ಪಡೆದುಕೊಂಡಿಲ್ಲ. 2017 ರಿಂದ 2021ರ ಅವಧಿಯಲ್ಲಿ ನನ್ನ ಮುಖ್ಯವಿಚಾರಣೆಯಲ್ಲಿ ಕೇಳಿದಂತೆ ಪ್ರತಿವರ್ಷ 6997ರೂಪಾಯಿ ನನಗೆ ಬೋನಸ್ ಬರಬೇಕೆನ್ನುವ ಬಗ್ಗೆ ದಾಖಲೆ ನನ್ನಲ್ಲಿಲ್ಲ ಮತ್ತು

ಆ ಬೋನಸ್ ನನಗೆ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ಈ ಅವಧಿಯ ಬೋನಸ್ಸನ್ನು ನನಗೆ ನೀಡಬೇಕೆಂದು ನಾನು 2ನೇ ಪಕ್ಷಗಾರರ ಬಳಿ ಕೇಳಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ.

ನನಗೆ ಇನ್ಸೆಂಟಿವ್ ನೀಡಬೇಕು ಎನ್ನುವ ಬಗ್ಗೆ ನನ್ನ ಮತ್ತು 2ನೇ ಪಕ್ಷಗಾರರ ನಡುವೆ ಯಾವುದೇ ಪತ್ರ ವ್ಯವಹಾರ ಆಗಿಲ್ಲ ಹಾಗೂ ದಾಖಲೆಗಳೂ ಸಹ ಇಲ್ಲ ಎಂದರೆ ಸಾಕ್ಷಿಯು ಮೌಖಿಕವಾಗಿ ನಡೆದಿರುತ್ತದೆ, ನಾನು ಇನ್ಸೆಂಟಿವ್ ಪಡೆದಿರುವ ಬಗ್ಗೆ ಬ್ಯಾಂಕ್ ಸ್ಟೇಟ್ಮೆಂಟ್ ಹಾಕಿರುತ್ತೇನೆ ಎನ್ನುತ್ತಾರೆ. ನಾನು 2ನೇ ಪಕ್ಷಗಾರರಿಂದ ಅವರ ವಾರ್ಷಿಕ ಟರ್ನ್ ಓವರ್ ಮೇಲೆ ಇಷ್ಟು ಶೇಕಡಾವಾರು ಇನ್ಸೆಂಟಿವ್ ಕೇಳುವ ಹಕ್ಕು ನನಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮೌಖಿಕ ಕರಾರಿನನ್ವಯ ಆಗಿತ್ತು, ಅದೇ ರೀತಿ ನನಗೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಮೌಖಿಕ ಕರಾರು ಆಗಿತ್ತು ಎನ್ನುವ ಬಗ್ಗೆ ನನ್ನ ಅರ್ಜಿಯಲ್ಲಾಗಲೀ, ಮುಖ್ಯವಿಚಾರಣೆಯಲ್ಲಾಗಲೀ ಹೇಳಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಇನ್ಸೆಂಟಿವ್, ವೇತನ ಸಹಿತ ರಜೆ ಮತ್ತು ಬೋನಸ್ ಇವುಗಳನ್ನು ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಪ್ರತಿ ಸಂದರ್ಭದಲ್ಲೂ ನನ್ನ ಹುದ್ದೆಯನ್ನು ಬದಲಾವಣೆ ಮಾಡುತ್ತಾ ಒಂದೊಂದು ರೀತಿಯಲ್ಲಿ ಪರಿಹಾರ ಕೇಳುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಾರ್ಮಿಕ ಇಲಾಖೆ 2ನೇ ಪಕ್ಷಗಾರರ ಕಡೆಯಿಂದ ಸುಮಾರು 19500ರೂಪಾಯಿ ಪಡೆದುಕೊಂಡಿರುತ್ತೇನೆ.

ನನಗೆ ಈಗ ತೋರಿಸಿದ ದಾಖಲೆ ನಾನು ಕಾನೂನು ಪದವಿ ಮುಗಿಸಿದ ನಂತರ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಗೆ ನೀಡಿದ ಮಾಹಿತಿ ಎಂದರೆ ನಿಜ. ಈ ದಾಖಲೆಯನ್ನು ನಿಆರ್.7 ಎಂದು ಗುರುತಿಸಲಾಯಿತು. ನಾನು ಕಾನೂನು ಪದವೀಧರನಾಗಿ ಸರ್ಕಾರ ಕೊಡುವಂತಹ ಸ್ಟೈಫಂಡ್ ಪಡೆದುಕೊಂಡಿಲ್ಲ. ನಾನು 5 ಬ್ಯಾಂಕ್ ಖಾತೆ ಹೊಂದಿರುತ್ತೇನೆ. ಆ

ಖಾತೆಗಳು, ಕಾರ್ಪೊರೇಷನ್ ಬ್ಯಾಂಕ್, ಕರ್ನಾಟಕ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಬಂಧನ್ ಬ್ಯಾಂಕ್ , ಕಾವೇರಿ ಗ್ರಾಮೀಣ ಬ್ಯಾಂಕ್ ಆಗಿರುತ್ತದೆ. ಈ ಯಾವುದೇ ಬ್ಯಾಂಕ್ ಖಾತೆಗೆ ನನಗೆ ಸ್ಟೈಫಂಡ್ ಬಂದಿರುವುದಿಲ್ಲ. ದಿಃ29-3-2019ರಲ್ಲಿ ನಾನು ಬಾರ್ ಕೌನ್ಸಿಲ್ ನಲ್ಲಿ ಎನ್ರೋಲ್ ಮಾಡಿಕೊಂಡಿರುತ್ತೇನೆ. ಆನಂತರ ನಾನು ವಕೀಲ ವೃತ್ತಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ, ಹಾಗೆಯೇ ಈ ಪ್ರಕರಣವನ್ನು ಸಲ್ಲಿಸಿ ಸುಳ್ಳು ಕ್ಲೇಂ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪಕ್ಷಗಾರರಿಂದ ನನಗೆ ಯಾವುದೇ ಸೌಲಭ್ಯಗಳು ಬರಬೇಕಾಗಿಲ್ಲದಿದ್ದರೂ ಕೂಡ ಅಕ್ರಮ ಲಾಭಗಳಿಸುವ ಉದ್ದೇಶದಿಂದ ನಾನು ವೃತ್ತಿಯಲ್ಲಿ ವಕೀಲರು ಎಂಬ ಕಾರಣದಿಂದ 2ನೇ ಪಕ್ಷಗಾರರ ಮೇಲೆ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು 2ನೇ ಪಕ್ಷಗಾರರಲ್ಲಿ ಯಾವತ್ತೂ ಪೂರ್ಣ ಪ್ರಮಾಣದ ನೌಕರರಾಗಿ ಕೆಲಸ ಮಾಡಿಕೊಂಡಿರಲಿಲ್ಲ, ಅವಶ್ಯಕತೆ ಇದ್ದಾಗ ಅವರು ಕರೆಯುತ್ತಿದ್ದರು, ಆಗ ನಾನು ಮಾಡಿಕೊಡುತ್ತಿದ್ದ ಕೆಲಸಕ್ಕೆ ಸರಿಯಾದ ಸಂಭಾವನೆ ನೀಡುತ್ತಿದ್ದರು ಎಂದರೆ ಸರಿಯಲ್ಲ. ಹಾಗೆಯೇ ನಾನು ಕಾನೂನು ಪದವಿ ಓದುತ್ತಿದ್ದಾಗಲೂ ಕೂಡ 2ನೇ ಪಕ್ಷಗಾರರಿಂದ ಕರೆ ಬಂದಾಗ ಹೋಗಿ ಕೆಲಸ ಮಾಡಿಕೊಟ್ಟು ಅದಕ್ಕೆ ಸರಿಯಾದ ಸಂಭಾವನೆ ಪಡೆಯುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಮಾಡುತ್ತಿದ್ದ ಅರೆಕಾಲಿಕ ಕೆಲಸಕ್ಕೆ ಸಂಬಂಧಿಸಿದಂತೆ ಅವರು ನನಗೆ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು 2017ರಿಂದ 2021ರ ಅವಧಿಯಲ್ಲಿ 2ನೇ ಪಕ್ಷಗಾರರ ಬಳಿ ಖಾಯಂ ಕೆಲಸಗಾರನಿದ್ದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಗುರುತಿನಚೀಟಿ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇಲ್ಲ ಎನ್ನುತ್ತಾರೆ.ಆ ಗುರುತಿನ ಚೀಟಿಯಲ್ಲಿ 2ನೇ ಪಕ್ಷಗಾರರ ಸಹಿ ಅಥವಾ ಅಧಿಕೃತ ಅಧಿಕಾರಿಯ ಸೀಲು ಇರುವುದಿಲ್ಲ ಎಂದರೆ ಸಾಕ್ಷಿಯು, ಅವರು ಏನು ಕೊಟ್ಟಿರುತ್ತಾರೋ ಅದನ್ನು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ಗುರುತಿನ ಚೀಟಿಯನ್ನು ನಾನೇ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನ ಎಂದರೆ ಸರಿಯಲ್ಲ. ಅಕ್ರಮ ಸಂಪಾದನೆ ಮಾಡುವ ಉದ್ದೇಶದಿಂದ ಸುಳ್ಳು ಕೇಸು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಹಾಗೂ ನನ್ನ ವೃತ್ತಿಯ ಪ್ರಭಾವ ಬಳಸಿ

ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**